## ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.

## ಸಿ.ಸಿ. 613/2019

| | | |
|---|---|---|
| ಸಾಕ್ಷಿಯ ಹೆಸರುಃ | ಟಿ ಸಿ ಜಗದೀಶ | ಫ್ರಾಸಾಃಃ 4 |
| ತಂದೆಯ ಹೆಸರುಃ | ಲೇಟ್ ಟಿ ವಿ ಚಂದ್ರಮೌಳಿ | ಚಾಸಾಃಃ 3 |
| ವಯಸ್ಸುಃ | 67 ವರ್ಷ | ಪ್ರಮಾಣೀಕರಿಸಿದ<br>ದಿಃ 16/12/2024 |
| ಉದ್ಯೋಗಃ | ನಿವೃತ್ತ ಆಹಾರ ಶಿರಸ್ತೇದಾರರು | |
| ವಾಸಸ್ಥಳಃ | ಮೈಸೂರು. | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ನಾನು ನವೆಂಬರ್–2015 ರಿಂದ ಎಪ್ರಿಲ್–2018 ರವರೆಗೆ ಆಹಾರ ಶಿರಸ್ತೇದಾರರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 18/06/2016 ರಂದು ಚಾಸಾ–1 ರವರು ಕರೆಮಾಡಿ ಬೆಟ್ಟದಪುರದ ರಾಗಿ ಗೋಡೌನ್ ಪರಿವೀಕ್ಷಣೆಗಾಗಿ ಬರುತ್ತಿದ್ದೇನೆ, ತಾವು ಅಲ್ಲಿಗೆ ಬನ್ನಿ ಎಂದು ತಿಳಿಸಿದ್ದರು. ಆ ರೀತಿ ನಾನು ಚಾಸಾ–2 ರವರೊಂದಿಗೆ ಬೆಟ್ಟದಪುರಕ್ಕೆ ಮಧ್ಯಾಹ್ನ 2.00 ಗಂಟೆಗೆ ಹೋಗಿ ಚಾಸಾ–1 ರವರನ್ನು ಕಾಯುತ್ತಿದ್ದಾಗ, ಚಾಸಾ–1 ರವರು ಪುನಃ ಕರೆಮಾಡಿ ಅತ್ತಿಗೋಡು ಗ್ರಾಮದ ಪ್ರಕಾಶ್ ಶೆಟ್ಟಿಯವರ ಮನೆಯಲ್ಲಿ ಪಡಿತರ ಕಾರ್ಡುದಾರರಿಗೆ ವಿತರಿಸಬೇಕಾದ ಅಕ್ಕಿ ಮತ್ತು ಗೋದಿಯನ್ನು ಅಕ್ರಮವಾಗಿ ದಾಸ್ತಾನು ಇಟ್ಟುಕೊಂಡು ದುರುಪಯೋಗ ಮಾಡುತ್ತಿರುತ್ತಾರೆಂದು ಖಚಿತ ವರ್ತಮಾನ ಬಂದಿದ್ದು, ಅಲ್ಲಿಗೆ ದಾಳಿ ಮಾಡಲು ಹೋಗಬೇಕಾಗಿರುತ್ತದೆ, ಪಂಚರೊಂದಿಗೆ ಬನ್ನಿ ಎಂದು ತಿಳಿಸಿರುತ್ತಾರೆ. ನಾವು ಸದರಿ ಸ್ಥಳಕ್ಕೆ ಪಂಚರಾದ ಚಾಸಾ–4 ರಿಂದ 6 ರವರನ್ನು ಕರೆಸಿಕೊಂಡು, ಅವರಿಗೆ ವಿಷಯವನ್ನು ತಿಳಿಸಿ,

ಅವರನ್ನು ಜೊತೆಯಲ್ಲಿ ಕರೆದುಕೊಂಡು ಅತ್ತಿಗೋಡು ಗ್ರಾಮಕ್ಕೆ ಹೋಗಿ ಅಲ್ಲಿ ಕೇರಳಾಪುರ ರಸ್ತೆಯಲ್ಲಿರುವಂತಹ ಪ್ರಕಾಶ್ ಶೆಟ್ಟಿಯವರ ಮನೆಯ ಬಳಿ ಹೋಗಿ ಪರಿಶೀಲಿಸಲಾಗಿ, ಅಲ್ಲಿ ಒಂದು ಕೆಎ-45-5143 ನಂಬರಿನ ಬೊಲೇರೋ ವಾಹನ ನಿಂತಿದ್ದು, ಅದರ ಬಳಿ ಒಬ್ಬ ವ್ಯಕ್ತಿ ನಿಂತಿರುತ್ತಾರೆ. ಅವರನ್ನು ನಿಮ್ಮ ಹೆಸರೇನು ಎಂದು ಕೇಳಲಾಗಿ ನನ್ನ ಹೆಸರು ಪ್ರಶಾಂತ್ ಬಿನ್ ಪ್ರಕಾಶ್ ಶೆಟ್ಟಿ, 35 ವರ್ಷ ಎಂಬುದಾಗಿ ತಿಳಿಸಿರುತ್ತಾರೆ. ವಾಹನ ಯಾರದ್ದು ಎಂದು ಕೇಳಲಾಗಿ, ವಾಹನ ನಮ್ಮದೇ ಎಂದು ತಿಳಿಸಿರುತ್ತಾರೆ. ಸದರಿ ವಾಹನಕ್ಕೆ ಕೆಲವು ಚೀಲಗಳನ್ನು ತುಂಬುತ್ತಿದ್ದು, ಅದು ಏನೆಂದು ಕೇಳಲಾಗಿ ಅದರಲ್ಲಿ ಅಕ್ಕಿ ಮತ್ತು ಗೋದಿಯನ್ನು ತುಂಬಿರುವುದಾಗಿ ತಿಳಿಸಿರುತ್ತಾರೆ. ನಾವು ಸದರಿ ವ್ಯಕ್ತಿಗೆ ನಿಮ್ಮ ಮನೆ ಮತ್ತು ವಾಹನವನ್ನು ತಪಾಸಣೆ ಮಾಡಲು ಬಂದಿರುವುದಾಗಿ ಹಾಗೂ ದೂರು ಬಂದಿರುವ ವಿಚಾರವನ್ನೂ ಸಹ ತಿಳಿಸಿರುತ್ತೇವೆ. ವಾಹನವನ್ನು ಪಂಚರೊಂದಿಗೆ ಪರಿಶೀಲಿಸಲಾಗಿ ವಾಹನದಲ್ಲಿ 13 ಚೀಲದ ಅಕ್ಕಿ ಮತ್ತು 11 ಚೀಲ ಗೋದಿ ಇರುವುದು ಕಂಡುಬಂದಿರುತ್ತದೆ. ತದನನಂತರ ಮನೆಯ ಒಳಭಾಗದಲ್ಲಿ ಆರೋಪಿ ಮತ್ತು ಪಂಚರೊಂದಿಗೆ ಹೋಗಿ ಪರಿಶೀಲನೆ ಮಾಡಲಾಗಿ, ಮನೆಯ ಒಳಗೆ 11 ಕೊರೆ ಚೀಲಗಳು ಮತ್ತು ಒಂದು ಕೋಣೆಯಲ್ಲಿ 16 ಕೊರೆ ಚೀಲಗಳು ಕಂಡುಬಂದಿರುತ್ತವೆ. ಸದರಿ ದಾಸ್ತಾನಿನ ಲೋಡ್ ಮಾಡುವ ವ್ಯಕ್ತಿಗಳಿಂದ ಚೀಲಗಳನ್ನು ಬುಚ್ಚಿ ಪರಿಶೀಲಿಸಲಾಗಿ, 11 ಚೀಲದಲ್ಲಿ ಅಕ್ಕಿ ದಾಸ್ತಾನು ಮತ್ತು 16 ಚೀಲಗಳಲ್ಲಿ ಗೋದಿ ಇರುವುದು ಕಂಡುಬಂದಿರುತ್ತದೆ. ಸ್ಥಳದಲ್ಲಿ 100 ಕೆಜಿ ಮತ್ತು 200 ಕೆಜಿ ತೂಕ ಮಾಡುವ ಸಾಮರ್ಥ್ಯ ಉಳ್ಳ ತೂಕದ ಯಂತ್ರಗಳು ಕಂಡುಬಂದಿರುತ್ತವೆ. ಈ ದಾಸ್ತಾನ್ನು ಎಲ್ಲಿಂದ ತಂದಿರಿ ಎಂದು ಮತ್ತು ಯಾರಿಂದ ತಂದಿರಿ ಎಂದು ಆರೋಪಿತರನ್ನು ಪ್ರಶ್ನಿಸಲಾಗಿ, ಚಿಕ್ಕಹನಸೋಗೆ ಮತ್ತು ದೊಡ್ಡಹನಸೋಗೆ ಗ್ರಾಮದ ಕಾರ್ಡುದಾರರಿಂದ ಪ್ರತಿ ಕೆ.ಜಿಗೆ ರೂ.8 ರಿಂದ 10 ರೂಪಾಯಿಗಳನ್ನು ನೀಡಿ ಖರೀದಿಸಿ ತಂದಿರುತ್ತೇನೆ ಎಂದು ತಿಳಿಸಿರುತ್ತಾರೆ. ಈ ಪಡಿತರವು ಕಾರ್ಡುದಾರರಿಗ ಉಚಿತವಾಗಿ ಕೊಡುವ ಪಡಿತರವಾಗಿದ್ದು, ಇದನ್ನು ನೀವು ಅಕ್ರಮವಾಗಿ ಖರೀದಿಸಿ, ದಾಸ್ತಾನು ಮಾಡಿರುವುದು ತಪ್ಪು ಎಂದು

ಕೇಳಲಾಗಿ ಅವರು ಹೌದು ಎಂದು ತಿಳಿಸಿರುತ್ತಾರೆ. ಈ ಬಗ್ಗೆ ದಾಸ್ತಾನು ಮಾಡಲು ಯಾವುದಾದರೂ ಪರವಾನಿಗೆ ಇದೆಯೇ ಎಂದು ಪ್ರಶ್ನಿಸಲಾಗಿ, ಯಾವುದೇ ಪರವಾಗನಿಗೆ ಇಲ್ಲವೆಂದು ತಿಳಿಸಿರುತ್ತಾರೆ. ಮತ್ತು ಈ ದಾಸ್ತಾನನ್ನು ನುಚ್ಚು ಮಾಡಿ ಪಶು ಆಹಾರ ಮಾಡಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದೇನೆ ಎಂಬುದಾಗಿ ಸಹ ತಿಳಿಸಿರುತ್ತಾರೆ. ಈ ಎಲ್ಲಾ ದಾಸ್ತಾನನ್ನು ತೂಕದ ಯಂತ್ರದಿಂದ ತೂಕ ಮಾಡಲಾಡಿ ಒಟ್ಟು 13.47 ಕ್ವಿಂಟಾಲ್ ಅಕ್ಕಿ ಮತ್ತು 12.16 ಕ್ವಿಂಟಾಲ್ ಗೋದಿ ದಾಸ್ತಾನು ಇರುವುದು ಕಂಡುಬಂದಿರುತ್ತದೆ. ಈ ಕೃತ್ಯವೂ ಅಗತ್ಯ ವಸ್ತುಗಳ ಕಾಯಿದೆ ಉಲ್ಲಂಘನೆಯಾದ್ದರಿಂದ ಈ ದಾಸ್ತಾನುಗಳನ್ನು ಮತ್ತು ಕೃತ್ಯಕ್ಕೆ ಉಪಯೋಗಿಸಲಾದ ವಾಹನವನ್ನು ಸರ್ಕಾರದ ವಶಕ್ಕೆ ಪಂಚರ ಸಮಕ್ಷಮದಲ್ಲಿ ಪಡೆಯಲಾಯಿತು. ಮತ್ತು ವಶಪಡಿಸಿಕೊಂಡ ಅಕ್ಕಿ ಮತ್ತು ಗೋದಿಯ ದಾಸ್ತಾನಿನಿಂದ ಅರ್ಧ ಕೆ.ಜಿಯ ತಲಾ 4 ಪ್ಯಾಕೇಟ್ ನಂತೆ ಸ್ಯಾಂಪಲ್ ನ್ನು ಬಟ್ಟೆ ಚೀಲದಲ್ಲಿ ಸಂಗ್ರಹಿಸಿ ದಾರದಿಂದ ಹೊಲೆದು, ಅರಗಿನಿಂದ **ಪಿಆರ್ ಒ** ಎಂಬುದಾಗಿ ಮುದ್ರೆ ಮಾಡಲಾಯಿತು. ತದನಂತರ ಅಕ್ಕಿ ಮತ್ತು ಗೋದಿ ದಾಸ್ತಾನನ್ನು ಕೆಡದಂತೆ ಸುರಕ್ಷಿತವಾಗಿಡಲು ಟಿಎಪಿಎಂಎಸ್, ಪಿರಿಯಾಪಟ್ಟಣ ತಾಲ್ಲೂಕು ರವರನ್ನು ಸ್ಥಳಕ್ಕೆ ಬರಮಾಡಿಕೊಂಡು ಅಕ್ಕಿ ಮತ್ತು ಗೋದಿ ದಾಸ್ತಾನನ್ನು ಅವರಿಗೆ ಹಸ್ತಾಂತರಿಸಿ ಸ್ವೀಕೃತಿ ಪಡೆಯಲಾಯಿತು. ಅಕ್ಕಿ ಸ್ಯಾಂಪಲ್ ಗಳು ಆರೋಪಿತ ಮತ್ತು ವಶಪಡಿಸಿಕೊಳ್ಳಲಾದ, ಬೊಲೇರೋ ವಾಹನವನ್ನು ಬೆಟ್ಟದಪುರ ಪೊಲೀಸ್ ಠಾಣಾಧಿಕಾರಿಗಳ ವಶಕ್ಕೆ ನೀಡಿ, ಚಾಸಾ-1ರವರು ದೂರನ್ನು ಸಲ್ಲಿಸಿರುತ್ತಾರೆ. ದೂರು ಕೊಡುವ ಸಮಯಕ್ಕೆ ನಾನು ಹಾಜರಿರುತ್ತೇನೆ. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ.

3. ಸಾಕ್ಷಿಯು ಆ ದಿನ ಸ್ಯಾಂಪಲ್ ತೆಗೆದ ಅಕ್ಕಿ ಮತ್ತು ಗೋದಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮು.ಮಾ.1 ರಿಂದ 4 ಎಂದು ಗುರುತಿಸಲಾಗಿದೆ. ಸಾಕ್ಷಿಯು ನಿಪಿ.1-ಮಹಜರ್ ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.1(ಡಿ)** ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ.3-ಸ್ವೀಕೃತಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು,

ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.3(ಸಿ)** ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ.2–ಹೇಳಿಕೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.2(ಸಿ)** ಎಂದು ಗುರುತಿಸಲಾಯಿತು. ಬೊಲೆರೋ ವಾಹನವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಪೋಟೋವನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ **ನಿ.ಪಿ.6** ಎಂದು ಗುರುತಿಸಲಾಗಿದೆ. ಆರೋಪಿತ ಈ ದಿನ ನ್ಯಾಯಾಲಯದ ಮುಂದೆ ಹಾಜರಿದ್ದಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಸಿ.ಎಸ್.ಎಂ ವಕೀಲರಿಂದಃ**

4. ನಾನು 3 ವರ್ಷಗಳ ಕಾಲ ಮೇಲ್ಕಂಡ ಕಚೇರಿಯಲ್ಲಿ ಕೆಲಸ ಮಾಡಿದ್ದೆ. ನಾನು ಪಿರಿಯಾಪಟ್ಟಣ ವ್ಯಾಪ್ತಿಗೆ ಮಾತ್ರ ಆಹಾರ ಶಿರಸ್ತೇದಾರನಾಗಿ ಕೆಲಸ ಮಾಡಿದ್ದೆ. ನಾನು ಒಬ್ಬನೇ ಆಹಾರ ಶಿರಸ್ತೇದಾರನಾಗಿದ್ದೆ. ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ 4 ಹೋಬಳಿಗಳು ಇವೆ ಎಂದರೆ ಸರಿ. ಕಸಬ ಹೋಬಳಿ, ರಾವಂದೂರು ಹೋಬಳಿ, ಬೆಟ್ಟದಪುರ ಹೋಬಳಿ ಮತ್ತು ಇನ್ನೊಂದು ಹೋಬಳಿ ಇದೆ. ಪಿರಿಯಾಪಟ್ಟಣ ವಿಸ್ತಾರವಾಗಿ ಮಲೆನಾಡಿಗೆ ಹೊಂದಿಕೊಂಡಂತೆ ಅರಣ್ಯ ಪ್ರದೇಶ ಇದೆ ಎಂದರೆ ಸರಿ. ನಮ್ಮ ವ್ಯಾಪ್ತಿಗೆ ಮೇಲ್ಕಂಡ 4 ಹೋಬಳಿಗಳೂ ಸೇರುತ್ತವೆ ಎಂದರೆ ಸರಿ. ನನ್ನ ಕೈ ಕೆಳಗೆ ಆಹಾರ ನಿರೀಕ್ಷಕರಾಗಿ 2 ಹುದ್ದೆಗಳಿದ್ದು, ಆದರೆ ಪ್ರಭಾರಿಯಾಗಿ ಒಬ್ಬರೇ ಆಹಾರ ನಿರೀಕ್ಷಕರಾಗಿ ಕೆಲಸ ಮಾಡುತ್ತಿದ್ದರು. 2 ಹೋಬಳಿಗೆ ಒಬ್ಬರೇ ನಿರೀಕ್ಷಕರಿದ್ದರು ಎಂದರೆ ಸರಿ.

5. ನನಗೆ ಕರೆ ಮುಖಾಂತರ ಮಾಹಿತಿ ಬಂದಿರುತ್ತದೆ. ನನಗೆ ಬೆಟ್ಟದಪುರದಲ್ಲಿ ರಾಗಿ ದಾಸ್ತಾನು ಇದೆ ನಾನು ಬರುತ್ತಿದ್ದೇನೆ, ನೀವು ಬನ್ನಿ ಎಂದು ಬೆಳಿಗ್ಗೆ 11.00 ಗಂಟೆ ಸಮಯದಲ್ಲಿ ಕರೆ ಮಾಡಿದ್ದರು. ಚಾಸಾ–1 ರವರು ಬೆಟ್ಟದಪುರಕ್ಕೆ ಮಧ್ಯಾಹ್ನ 1.30–2.00 ಗಂಟೆಗೆ ಬಂದಿದ್ದರು. ಅವರು ಕಿತ್ತೂರು ಮಾರ್ಗವಾಗಿ ಬೆಟ್ಟದಪುರಕ್ಕೆ ಬಂದಿದ್ದರು. ಚಾಸಾ–1 ರವರು ಅತ್ತಿಗೋಡು ಗ್ರಾಮಕ್ಕೆ ನಮ್ಮನ್ನು ಮತ್ತು ಪಂಚರನ್ನು ಕರೆಸಿಕೊಂಡರು. ಚಾಸಾ–1 ರವರು ಕಿತ್ತೂರಿಗೆ ಯಾವ ಮಾರ್ಗದಲ್ಲಿ ಬಂದರು ಎಂದು ನನಗೆ ಗೊತ್ತಿಲ್ಲ. ಚಾಸಾ–1 ರವರು ಕೆ.ಆರ್.ನಗರ ಮಾರ್ಗದಲ್ಲಿ ಕಿತ್ತೂರಿಗೆ ಬಂದರು ಎಂದರೆ ನನಗೆ

ಗೊತ್ತಿಲ್ಲ. ನಾನು ಬೆಟ್ಟದಪುರಕ್ಕೆ ಮಧ್ಯಾಹ್ನ 2.00 ಗಂಟೆಗೆ ಬಂದೆ ಎಂದರೆ ಸರಿ. ಬೆಟ್ಟದಪುರದಿಂದ 15 ನಿಮಿಷಗಳಲ್ಲಿ ಅತ್ತಿಗೋಡಿಗೆ ಹೋದೆ. ನಾನು ಹೋಗುವಷ್ಟರಲ್ಲಿ ಚಾಸಾ–1ರವರೂ ಸಹ ಅತ್ತಿಗೋಡು ಗ್ರಾಮಕ್ಕೆ ಬಂದಿದ್ದರು. ನಂತರ ನಾವು ಮತ್ತು ಚಾಸಾ–1ರವರು ಸೇರಿ ಆರೋಪಿತನ ಮನೆಯ ಬಳಿ ಹೋದೆವು ಎಂದರೆ ಸರಿ. ನಾವು ದಾಳಿ ಮಾಡುವ ಸಮಯದಲ್ಲಿ ಗ್ರಾಮಸ್ಥರು ಇದ್ದರು. ಪಂಚರನ್ನು ನಾವು ಬೆಟ್ಟದಪುರದಿಂದ ಕರೆದುಕೊಂಡು ಹೋಗಿದ್ದೆವು. ಅಕ್ಕಿ ಮತ್ತು ಗೋದಿ ಪಡಿತರರಿಂದ ಖರೀದಿಸಿದ್ದು ಎಂದು ತೋರಿಸಿರುವ ಚಿಹ್ನೆಗಳು ಅಥವಾ ಚೀಟಿಗಳು ಇರಲಿಲ್ಲ. ಸಾಕ್ಷಿ ಮುಂದುವರೆದು ಆರೋಪಿತನೇ ಪಡಿತರ ದಾಸ್ತಾನು ಎಂದು ತಿಳಿಸಿದ್ದರು ಎಂದು ನುಡಿಯುತ್ತಾರೆ. ಅಕ್ಕಿ ಮತ್ತು ಗೋದಿ ಸಾಮಾನ್ಯವಾಗಿ ಎಲ್ಲರ ಮನೆಯಲ್ಲೂ ಇರುವಂತಹ ವಸ್ತುಗಳು ಎಂದರೆ ಸರಿ, ಆದರೆ ಕಡಿಮೆ ಪ್ರಮಾಣದಲ್ಲಿ ಇರುತ್ತದೆ. ನಾನು ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಕ್ಕಿ ಮತ್ತು ಗೋದಿಯನ್ನು ಆರೋಪಿತರು ಪಡಿತರ ಚೀಟಿದಾರರಿಂದ ಖರೀದಿಸಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಮೂಲತಃ ವ್ಯಾಪಾರಸ್ಥರು ಎಂದರೆ ನನಗೆ ಗೊತ್ತಿಲ್ಲ. ಆರೋಪಿತರು ಹಲಸಂದೆ, ಹುರುಳಿ ಮತ್ತು ಇತರೆ ಆಹಾರ ಪದಾರ್ಥಗಳನ್ನು ಮಾರಾಟ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿತರು ಆಹಾರ ಪದಾರ್ಥಗಳನ್ನು ರೈತರಿಂದ ಖರೀದಿಸಿ, ಮೈಸೂರಿಗೆ ಸರಬರಾಜು ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.

6. ಮಹಜರ್ ಸ್ಥಳದ ಚಕ್ಕುಬಂದಿ ಪೂರ್ವಕ್ಕೆ ಆರೋಪಿತರ ವಾಸದ ಮನೆ, ದಕ್ಷಿಣಕ್ಕೆ ತರಕಾರಿ ಶೆಟ್ಟರ ಮನೆ, ಪಶ್ಚಿಮಕ್ಕೆ ಸರ್ಕಾರಿ ರಸ್ತೆ, ಉತ್ತರಕ್ಕೆ ವ್ಯವಸಾಯದ ಜಮೀನು ಇದೆ. ಸ್ಥಳ ಮಹಜರ್ ನಲ್ಲಿ ಬರೆದಿರುವ ವಿಷಯ ಗೊತ್ತು.

7. ಎಷ್ಟು ಗ್ರಾಂ ತೂಕದ ಅಕ್ಕಿ ಮತ್ತು ಗೋದಿ ಇತ್ತೆಂದು ನೆನಪಿಲ್ಲ. ಪಂಚರನ್ನು ಬೆಟ್ಟದಪುರದಿಂದ ಕರೆದುಕೊಂಡು ಹೋಗಿದ್ದೆವು. ಸ್ಥಳೀಕರನ್ನು ಪಂಚನಾಮೆಗೆ ಪಂಚರನ್ನಾಗಿ ಮಾಡಿಕೊಂಡಿಲ್ಲ. ಆರೋಪಿತರ ವಿರುದ್ಧ ನಮ್ಮ ಅಂಕಿಅಂಶಕ್ಕೋಸ್ಕರ ಸುಳ್ಳು ದೂರನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಮೇಲಾಧಿಕಾರಿಗಳು

ಶಾರೀಕಾಗಿ ಆರೋಪಿತ ಯಾವುದೇ ತಪ್ಪು ಮಾಡಿಲ್ಲದಿದ್ದರೂ ಸುಳ್ಳು ದೂರನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಚಾಸಾ−1ರವರ ವಿರುದ್ಧ ದೂರು ದಾಖಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಚಾಸಾ−1ರವರ ಅಧಿಕಾರ ವ್ಯಾಪ್ತಿಯಲ್ಲಿ 500 ಕ್ವಿಂಟಾಲ್ ಅಕ್ಕಿ ಕಳುವಾಗಿದೆ ಎಂದು ಅವರ ವಿರುದ್ಧ ದೂರು ದಾಖಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಅದು ನಂಜನಗೂಡು ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿ ಕೇಸು ಇನ್ನೂ ನಡೆಯುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ಅವರ ವಿರುದ್ಧ ದೂರು ಇರುವುದರಿಂದ ಪೆನ್ಷನ್ ಸೆಟಲ್ಮೆಂಟ್ ಆಗಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಪಿರಿಯಾಪಟ್ಟಣ.